ಕ್ರಿಯಾಶಕ್ತಿಯಿಂದ ಮರೆ ಮಾಡಬಹುದಷ್ಟೆ. ಅದು ನಮ್ಮ ಸಂಯಮದ ಶಕ್ತಿಯನ್ನು ಅವಲಂಬಿಸಿರುತ್ತೆ. ಮನಸ್ಸು ಮಾತ್ರ ಸರ್ವ ತಂತ್ರ ಸ್ವತಂತ್ರ, ನಾಗರಿಕತೆ ಒಳಗಾದ ಬುದ್ಧಿ ಮನಸ್ಸಿನ ಹುಚ್ಚು ಓಟವನ್ನು ತಡೆದು ನಮ್ಮ ಮರ್ಯಾದೆ ಕಾಪಾಡಬಲ್ಲದು. ಬುದ್ಧಿ ಪ್ರಧಾನ ಇರುವವನು ಮಾತ್ರ ಈ ಮನಸ್ಸಿನೊಳಗಣ ತಳಮಳ, ಆಲೋಚನೆ, ವೇದನೆ, ಪಾಪದ ಕ್ರಿಯಾಸಕ್ತಿ ಇದನ್ನೆಲ್ಲಾ ತನ್ನ ಇಚ್ಛೆಗೆ ಮೀರಿ, ಅದರಿಂದ ಉಂಟಾಗುವ ಚುಚ್ಚುವ ನೋವನ್ನು ತನ್ನೊಳಗೇ ಅನುಭವಿಸುತ್ತಾ, ಹೊರನೋಟಕ್ಕೆ ನನಗೇನೂ ಆಗಿಯೇ ಇಲ್ಲವೆಂಬಂತೆ ನಾಟಕ ಆಡುತ್ತಾನೆ. ಅಂತಹ ಮನಸ್ಸಿನ ಕೆಟ್ಟ ರೀತಿಗಳನ್ನು ಹೊರಗಿಡಲು ತೀರ ಧೈರ್ಯ ಬೇಕಾಗುತ್ತದೆ. ಪ್ರಪಂಚವನ್ನು ಎದುರಿಸುವ ಧೀರತನ ಬೇಕಾಗುತ್ತದೆ. ಇಲ್ಲವಾದರೆ ದ್ವಂದ್ವದಲ್ಲಿ ಹುಚ್ಚನಾಗಿ ಬಿಡಬಹುದು. ಸಾಧಾರಣ ಜನ, ಮನಸ್ಸಲ್ಲಿದ್ದದನ್ನೆಲ್ಲಾ ಗಂಟು ಬಿಚ್ಚಿ ಹೊರಗಿಟ್ಟು, ತಮ್ಮ ಮರ್ಯಾದೆ ಹರಾಜು ಆಗಲು ಇಚ್ಛಿಸುವುದಿಲ್ಲ ಮತ್ತು ಅದಕ್ಕೆ ಹೊಂದಾಣಿಕೆ ಮಾಡಿಕೊಂಡು ಹೊರಗೆ ನಗುವಿನ ಮುಖವಾಡ ಹಾಕಿಕೊಂಡು 'ಎಷ್ಟು ಒಳ್ಳೆಯವರಪ್ಪಾ' ಎನ್ನಿಸಿಕೊಳ್ಳುತ್ತಾರೆ. ಇದಕ್ಕೆ ಹೊರತಾದ ಒರಟರೂ ಇರುತ್ತಾರೆ. ಅವರು ಮನಸ್ಸನ್ನು ಮುಚ್ಚಿಟ್ಟುಕೊಳ್ಳಲು ಹೋಗುವುದಿಲ್ಲ. ಅವರು, ನಾವು ಹೀಗಿದ್ದೇವೆ. ಹೀಗೇ ಇರ್ತೀವಿ ಎಂದು ಪ್ರತಿಭಟನೆ ಬಂಡಾಯ ಮಾಡುತ್ತಾರೆ. ತಪ್ಪು ಸರಿಗಳನ್ನು ಯಾರಿಗೋಸ್ಕರ ಮಾಡಬೇಕು? ಅದನ್ನು ಮಾಡುವುದಿಲ್ಲ. ನಮಗೆ ಸರಿ ಕಾಣಿಸುವುದೇ ನಮಗೆ ಸರಿ. ಸುಳ್ಳಿನ ನಾಟಕ ನಮಗೆ ಬೇಡ ಎಂದು ಒರಟು ಮಾತುಗಳನ್ನಾಡುವರು. ತಮ್ಮ ಒಳಗೊಂದು– ಹೊರಗೊಂದು ಇರದ ಸ್ವಭಾವಕ್ಕೆ ಹೆಮ್ಮೆ ಪಟ್ಟುಕೊಳ್ಳುತ್ತಾರೆ.

ಸುಸಂಸ್ಕೃತ ವಾತಾವರಣದಲ್ಲಿ ತಂದೆ ತಾಯಿಯರ ಅಂಕೆಯಲ್ಲಿ ಬೆಳೆದ, ಹೂ ಕುಂಡದ ಹೂವಿನಂತಿದ್ದ ಪ್ರಸಾದನಿಗೆ ಒರಟು ಹೇಗಾದರೂ ಬಂದೀತು?

ತನಗೆ ತಾನು ಬಂಧಿಯಾಗಿ, ಬೇರೆಯವರಿಗಾಗಿ ತಾನಿರುವೆ ಎಂದು ನಂಬಿದ್ದ ಪ್ರಸಾದ ಸಂಕೋಚ ಸ್ವಭಾವದವನು. ಬಂಡಾಯದವನಾಗಿದ್ದಿದ್ದರೆ ಅವನ ಜೀವನ ಕಥೆ ಬೇರೆಯೇ ಆಗಿರುತ್ತಿತ್ತು. ಎಷ್ಟೋ ವೇಳೆ ಅವನಿಗೆ ನಮ್ಮ ಸಮಾಜ, ನಮ್ಮ ಸಂಸ್ಕೃತಿಗಳಲ್ಲಿ ತಪ್ಪುಗಳು ಕಾಣುತ್ತಿದ್ದದ್ದು ಉಂಟು. ಆ ತಪ್ಪನ್ನು ಸರಿಪಡಿಸಿ, ಲೋಕಕ್ಕೆ ಮೇಲ್ಪಂಕ್ತಿ ತೋರಿಕೊಡುವಲ್ಲಿ ಸಂಕೋಚದ ಸಂಕೋಲೆ ಅವನನ್ನು ಬಿಗಿದುಬಿಡುತ್ತಿತ್ತು. ತಪ್ಪುಗಳನ್ನು ಕ್ಷಣದಲ್ಲಿ ಮಾಡಿ ಬಿಡಬಹುದು. ಆದರೆ ಆ ತಪ್ಪು ತಪ್ಪೆಂದು ಒಪ್ಪಿಕೊಂಡು ಅದನ್ನು ಸರಿಪಡಿಸಿಕೊಳ್ಳುವುದು ತುಂಬಾ ಕಷ್ಟದ ಕೆಲಸ.

ಪ್ರಸಾದನ ಶಕ್ತಿ, ದನಿ ಕುಗ್ಗುತ್ತಾ ಹೋದಾಗ ಅವನು ಶಿವಣ್ಣನ ಬಳಿ ಔಷಧ ತೆಗೆದುಕೊಳ್ಳಲೂ ಹೋಗುತ್ತಿರಲಿಲ್ಲ. ಶಿವಣ್ಣ ಆ ಬಗ್ಗೆ ಕೇಳಿದ್ದ, 'ಅದ್ಯಾಕೆ ಪ್ರಸಾದಪ್ಪಾ... ಔಷಧಿ ನಿಲ್ಸಕ್ಕೆ ಹತ್ರಿ...? ಹಿಂಗಾದ್ರೆ ನಿಮ್ಮ ಮೈ ಏನಾಗತ್ತೈತೆ...?'

'ಇನ್ನೇನು, ಜೀವ್ನ ಕೊನೇ ಮಟ್ಟದಲ್ಲಿ ಬಂದು ನಿಂತಿದೆ. ನನ್ನ ಕೆಲ್ಸಕಾರ್ಯ ಮಾಡುವುದರಲ್ಲಿ, ನನ್ನ ಬಯಕೆಗಳನ್ನು ಬಂಧಿಸುವುದರಲ್ಲಿ, ನನ್ನ ಪಾಪಗಳನ್ನೆಲ್ಲಾ ಅರಿತುಕೊಳ್ಳುವುದರಲ್ಲಿ ಗೆದ್ದಿದ್ದೇನೆ. ಆದರೆ ಯಮನನ್ನೂ ಗೆಲ್ಲಲು ನಾನ್ಯಾವ ದೈವಸಂಭೂತ ಹೇಳಪ್ಪಾ.'

'ಪ್ರಸಾದಪ್ಪ... ನೀವು ಭಾಳ ಓದ್ಕಂಡೋರು... ಏನೇನೊ ಹೇಳ್ಲಿಕ್ಕೆ ಹತ್ತೀರಿ... ಈ ನನ್ನ ತಲೀಗೆ ನೀವ್ ಹೇಳೂ ಮಾತು ಹತ್ತೂ ಹಂಗಿಲ್ರಿ... ಆದ್ರ ದೇವ್ರ ಸೇವಿ ಮಾಡೊ ನೀವು ಹಿಂಗೆಲ್ಲಾ ಮಾತಾಡೂದು ಸರಿ ಇಲ್ಲ ಬಿಡ್ರಿ... ಯಾವ ಅನ್ನೇಯ, ಪಾಪದ ಕೆಲ್ಸ ಮಾಡ್ದೇ ಇರೊ ನೀವು ಹೀಗ್ಯಾಕೆ ಅಗ್ಲಿಕ್ ಹತ್ತೀರಿ...

## ರೈತ-ಉದ್ಯಮಿ

ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ
ಸಣ್ಣಪುಟ್ಟ ಸಾಲಗಳಿಗೆ ಹೆದರಿ
ಕೋಟಿಗಟ್ಟಲೆ ಸಾಲ ಮಾಡಿದ
ಉದ್ಯಮಿ ದೇಶದಿಂದ ಪರಾರಿ

★ ಸು.ವಿಜಯಲಕ್ಷ್ಮಿ




ಧೈರ್ಯವಾಗಿ ಇರ್ಬೇಕಲ್ವಾ...!? ಇರ್ಲಿ ಬಿಡ್ರಿ ಪ್ರಸಾದಪ್ಪಾ... ಎಲ್ಲಾರಾ ಹೋಗಿ ಅಡ್ಡಾಡಿ ಬರೋಣ ಬರ್ರೀ... ನೀವ್ಯಾಕೊ ಯಾನೋ ಬೇಸರದಲ್ಲಿ ಇದ್ದೀರ ಅನ್ನಸ್ತೈತಿ... ಚಾಮುಂಡಿ ಬೆಟ್ಟಕ್ಕ ಹೋಗೂನ್ರಿ... ದೇವಿ ದರ್ಶನ ಮಾಡೂಣು... ನಾಳೀನೆ ಹೋಗೂಣ... ನಿಮ್ಮ ತಂದಿಯವ್ರಿಗೆ ಹೇಳಿ ಬರ್ರಿ... ಒಂದಿನ ಅವ್ರೇ ದೇವ್ರ ಪೂಜೆ ಮಾಡೂಕ ಹೇಳ್ರಿ... ಆದೀತಲ್ಲಾ...?'

### ಚಾಮುಂಡಿ ಬೆಟ್ಟದತ್ತ ಪಯಣ

ಶಿವಣ್ಣನ ಬಲವಂತಕ್ಕೆ ಮುಂದೆ ಒಂದು ದಿನ ಬೆಳಗ್ಗೆ ಚಾಮುಂಡಿ ಬೆಟ್ಟಕ್ಕೆ ಅವನ ಜೊತೆ ಹೊರಟ. ಬೆಟ್ಟದ ಬುಡದ ತನಕ ಬಸ್ಸಿನಲ್ಲಿ ಹೋದರು. ಕಿಟಕಿ ಪಕ್ಕ ಕುಳಿತ ಪ್ರಸಾದ ಆಚೆ ನೋಡಿದ. ಆ ಪವಿತ್ರ ಬೆಟ್ಟ, ಎಳೇ ಸೂರ್ಯನ ಕಿರಣಗಳಲ್ಲಿ ಬೆಳಕಿನ ತುಂತುರು ಸ್ನಾನ ಮಾಡುತ್ತ ನಿಂತಂತೆ ಅನಿಸಿತು. ದೈವೀಕ ದೃಶ್ಯ ಕಂಡು ಅವನ ಎದೆಯಲ್ಲಿ ಹೊಡೆತ ಪ್ರಾರಂಭವಾಯಿತು. ಈ ಬೆಟ್ಟವನ್ನು ಕಾಲ್ನಡಿಗೆಯಲ್ಲಿ ಹತ್ತಿ, ಆಯಾಸ ಕಾಲಿನ ನೋವು ಅನುಭವಿಸಿ ದೇವೀ ದರ್ಶನ ಮಾಡುವುದೇ ಸೂಕ್ತ ಅನಿಸಿತು. ಬಸ್ಸಿನ ಸುಖ ಪಯಣ ಅವನು ಒಪ್ಪಲಾಗಲಿಲ್ಲ. ಬಸ್ಸು ಇನ್ನೇನು ಬೆಟ್ಟ ಹತ್ತಲು ಗೇರ್ ಬದಲಾಯಿಸಿ ಕೊಳ್ಳುತ್ತಿತ್ತು. ಇದ್ದಕ್ಕಿದ್ದಂತೆ ಅವನು ಕಂಡಕ್ಟರಿಗೆ ಕೂಗಿ ಹೇಳಿದ, 'ಕಂಡಕ್ಟರೇ... ಬಸ್ಸು ನಿಲ್ಸಿ ಇಳೀಬೇಕು' ಪಕ್ಕದಲ್ಲಿದ್ದ ಶಿವಣ್ಣನಿಗೆ ಶಿವಣ್ಣನ ಕೂಗು ಕೇಳಿ ಅಚ್ಚರಿಯಾಯಿತು.

'ಏನ್ರೀ ರಾಯ್ರು... ಇದೇನು ಮಾಡ್ಲಿಕ್ಕೆ ಹತ್ತೀರಿ...? ಇಲ್ಲಿ ತನಕ ಬಂದ ಮೇಲೆ ಬೆಟ್ಟ ಹತ್ತಿ ಹೋಗಿ ದೇವಿ ದರ್ಶನ ಪಡೆಯೋದು ಬ್ಯಾಡೇನು...!'

ಕಂಡಕ್ಟರ್ 'ಸ್ಟಾಪ್' ಎಂದು ಡ್ರೈವರಿಗೆ ಸೂಚನೆ ಕೊಟ್ಟ ಮೇಲೆ ಗಾಡಿ ನಿಲ್ಲುತ್ತಿದ್ದಂತೆಯೇ ಇಳಿಯುತ್ತಿದ್ದ ಪ್ರಸಾದ ಹೇಳಿದ.

'ಚಾಮುಂಡೇಶ್ವರಿ ದರ್ಶನ ಮಾಡೋಕೇ ಅಂತ್ಲೇ ಬಂದು ಹಾಗೆ ಹಿಂದಿರುಗುವುದುಂಟೇ ಶಿವಣ್ಣ...? ನಾನು ನಡೆದುಕೊಂಡು ಬೆಟ್ಟ ಏರಿ ದೇವಿ ದರ್ಶನ ಮಾಡ್ತೀನಿ... ನೀವು ಬೇಕಿದ್ರೆ ಬಸ್ನಲ್ಲೇ ಬನ್ನಿ' ತಾನೂ ಏಳುತ್ತ ಶಿವಣ್ಣ ಹೇಳಿದ,

'ನೀವೇ ನಡೀತಾ ಹೊಂಟ್ರೆ, ನಾ ಗಟ್ಟಿ ಮುಟ್ಟಾಗಿ ಇದೇನ್ರಿ... ನಾನು ಬಸ್ನಲ್ಲಿ ಹೋಗ್ತಿನೇನ್ರಿ!?... ನಾನೂ ನಿಮ್ಮ ಜೋತೀಗೆ ಬರೋನು... ಆದ್ರೆ ನಿಮ್ಗೆ ಈ ನಿಶ್ಶಕ್ತಿಲಿ ಬೆಟ್ಟ ಹತ್ತೋಕೆ ಆಗ್ತದೇನ್ರಿ?... ಬ್ಯಾಡ್ರೀ... ನಿಮ್ಗೆ ಅಗ್ದೀ ಆಯಾಸ ಆಗ್ತದ್ರೀ... ಬ್ಯಾಡ್ರೀ...' ಪ್ರಸಾದ ಜವಾಬು ನೀಡದೆ ಇಳಿದೇ ಬಿಟ್ಟ. ಶಿವಣ್ಣನೂ ಅವನ ಹಿಂದೆಯೇ ಇಳಿದ. ಬಸ್ಸು ಹೊರಟೇ ಹೋಯಿತು.

ಪ್ರಕೃತಿಯ ದಿವ್ಯಕ್ಕೆ ಆಲಂಗಿಸಿಕೊಂಡ ಭಾವನೆ ಪ್ರಸಾದನಿಗಾಯಿತು. ಅದರೊಳಗೆ ತಾನೂ ವಿಲೀನನಾಗಿ 'ಇಲ್ಲ'ವಾಗಿ ಹೋಗಿಬಿಡಬೇಕೆನ್ನಿಸಿತು. 'ಒತ್ತಡದ ಮನಸ್ಸನ್ನು ತನ್ನೊಳಗೆ ಸೆಳೆದುಕೊಳ್ಳುವ ಶಕ್ತಿ ಇರುವುದು ಇವಳೊಬ್ಬಳಿಗೇ' ಎಂದುಕೊಂಡ.

ಅವನು ತನ್ನಲ್ಲಿ ತಾನೇ ಮಾತಾಡಿಕೊಳ್ಳಲು ಬಿಡದೆ ಆ ಶಿವಣ್ಣ ಮಾತಾಡಲು ತೊಡಗಿಬಿಟ್ಟ.

'ಅಲ್ರೀ ಪ್ರಸಾದಪ್ಪ... ಬೆಟ್ಟ ಹತ್ತಿದ್ರ ನಿಮಗೆ ತೀರಾ ಆಯಾಸ ಆಗ್ತದ್ರೀ... ಯಾಕ್ರೀ ಹೀಂಗ ಮಾಡಿದ್ರಿ...?'

ಮೆಟ್ಟಲುಗಳನ್ನು ಹತ್ತುತ್ತಲೇ ಪ್ರಸಾದ ಸಹನೆ ಮೀರಿದಂತೆ ಅವನಿಗೆ ಉತ್ತರಿಸಿದ, 'ಮನಸ್ಸು ಗಟ್ಟಿ ಮಾಡ್ಕೊಂಡ್ರೆ ಎಂಥ ವಯಸ್ಸಾದ ಕಾಯಿಲೆಯವ್ರೂ ದೇವ್ರ ಸೇವೆ ಮಾಡಲು ಬೆಟ್ಟ ಮಾತ್ರವಲ್ಲ ಹಿಮಾಲಯ ಪರ್ವತಾನೂ ಹತ್ತಿಬಿಡ್ತಾರೆ! ಹಿಂದಿನ ಕಾಲ್ದಲ್ಲಿ ಬದ್ರಿನಾಥ, ಕೇದಾರನಾಥ ಯಾತ್ರೆಗಾಗಿ ನಡೆದುಹೋಗುತ್ತಿದ್ದವರದಲ್ಲಿ ವಯಸ್ಸು ಮಾಗಿದವರು ಇರುತ್ತಿದ್ದರಲ್ಲವೇ. ಆಗ ಮೋಟಾರು ರಸ್ತೆ ಸಹ ಇರಲಿಲ್ಲ. ಊಟ, ಪಾನೀಯ ಸಹ ಸಿಗುತ್ತಿರಲಿಲ್ಲ. ನಮ್ಮ ತಾತ, ಅಜ್ಜಿ ಬದ್ರಿ ಯಾತ್ರೆಗೆ ಹೋದಾಗ ಅಕ್ಕಿ, ಬೇಳೆ, ಮುಂತಾದವು ಗಳ ಜೊತೆ ಕುಮಟಿ ಒಲೇನೂ ಹೊತ್ತುಕೊಂಡೇ ಹೋಗಿ ಊಟ ತಾವೇ ತಯಾರಿಸಿಕೊಳ್ಳುತ್ತಿದ್ದರು. ನದಿ ದಡದ 'ಚಟ್ಟಿ'ಗಳಲ್ಲಿ ಮಧ್ಯೆ ಮಧ್ಯೆ ತಂಗುತ್ತಾ ನಡೆದು ನಡೆದೇ ಹೋಗುತ್ತಿದ್ದರು.'

'ಅವ್ರು ವಯಸ್ಸಾದ್ರೂ ನಿಮ್ಮ ಹಾಗೆ ಬ್ಯಾನೆ ಇರ್ಲಿಲ್ಲ. ಬೆಟ್ಟ ಹತ್ತೋ ಅಷ್ಟು ಗಟ್ಯಾಗೆ ಇರ್ತಿದ್ರಲ್ವಾ...?'

'ಹಾಗೇನಿಲ್ಲ ಸಾಯೋ ಮುಂಚೆ ದೇವ್ರ ದರ್ಶನ ಮಾಡಿ, ಅಲ್ಲೇ ಪ್ರಾಣ ಹೋದ್ರೂ ಚಿಂತೆ ಇಲ್ಲ ಅನ್ನೊ ದೃಢ ನಿರ್ಧಾರ ಹೊತ್ತು ಹೋಗುತ್ತಿದ್ದರು..